ಇಡಿಸಿದ. ಬಹುಶಃ ಕುಂಕಮವಿರಬೇಕು. ಮತ್ತೇನೋ ಅದೇ ಹರಿವಾಣದಿಂದ ತೆಗೆದು ಒಂದು ಸುತ್ತು ನಿವಾಳಿಸಿ ಗಾಳಿಗೆ ತೂರಿದ. ಒಂದು ಕ್ಷಣ ಬೂದಿ ಮುಚ್ಚಿಕೊಂಡಂತಾಗಿ ಎಲ್ಲವೂ ಮಸುಕಾಗಿ ಏನೂ ಕಾಣಲಿಲ್ಲ. ಮತ್ತೆ ಎಲ್ಲವೂ ಸ್ಪಷ್ಟವಾದಾಗ ಆತ ಮತ್ತೊಂದು ಹೆಣ್ಣಿನ ಕೈ ಹಿಡಿದು ಅದೇ ಬಾವಿಕಟ್ಟೆಗೆ ಮತ್ತೆ ಸುತ್ತು ಬರುತ್ತಿದ್ದ. ಆಕೆ ರೇಷ್ಮೆ ಸೀರೆಯುಟ್ಟು ಸಾಲಂಕೃತವಾಗಿ ಅಲಂಕರಿಸಿಕೊಂಡಿದ್ದಳು. ಯಾರಾಕೆ? ಅದುವರೆಗೂ ನಾನಾಕೆಯನ್ನು ಕಂಡಿರಲೇ ಇಲ್ಲ. ಅವಳು ಅಳುತ್ತಿದ್ದಳು!

ನನಗೆ ಕೇಳುತ್ತಿದ್ದದ್ದು ಅವಳ ಬಿಕ್ಕುವಿನ ಧ್ವನಿ ಹಾಗಾದರೆ? ಮತ್ತವನು? ಅವರಿಬ್ಬರನ್ನೂ ಬಾವಿಕಟ್ಟೆಗೆ ಸುತ್ತಿಸುತ್ತಿರುವ ಆ ಸಣಕಲು ಆಕೃತಿಯ ಅವನು? ಯಾರಾತ? ಅಂದು ಮೆಟ್ಟಿಲ ಮೇಲೆ ಕಂಡ ಅದೇ ಮುಖವೇ? ಸುಬ್ರಮಣಿಯೇ?

ನನಗೆ ಜಂಘಾಬಲವೇ ಉಡುಗಿ ಹೋದಂತೆನ್ನಿಸಿ ಸಟ್ಟನೆ ಕಿಟಕಿ ಮುಚ್ಚಿದೆ. ಕಿಟಕಿಯ ಕೆಳಗೆ ಹಾಗೇ ಕುಸಿದು ಕುಳಿತೆ. ಏನು ನಡೆಯುತ್ತಿದೆ ಇಲ್ಲಿ? ದೇವಿ ಪೂಜೆಯೇ? ಶಕ್ತಿ ಆವಾಹನೆಯೇ? ವಾಮಾಚಾರವೇ?

ಆನಂತರ ದಟ್ಟ ಧೂಪ, ಊದುಬತ್ತಿಯ ವಾಸನೆಯೊಂದು ಮುಚ್ಚಿದ ನನ್ನ ಕಿಟಕಿಯನ್ನೂ ಸೀಳಿಕೊಂಡು ಒಳ ಬಂತು. ಆಗಿನಿಂದಲೂ ಮಣಮಣಮಣಯೆಂದು ಕಿವಿಯಲ್ಲಿ ನಿರಂತರವಾಗಿ ಮೊಳಗಿದಂತೆ ಭಾಸವಾಗುತ್ತಿದ್ದ ಆ ಸದ್ದು ಗಂಡು ಆಕೃತಿಯ ಬಾಯಿಯಿಂದ ಉದುರುತ್ತಿರುವ ಮಂತ್ರವೇ ಹಾಗಾದರೆ? ನಿದ್ದೆಯೆನ್ನುವುದು ಎಲ್ಲೋ ಹಾರಿ ಹೋಗಿತ್ತು. ಏನು ಮಾಡಲೂ ತೋಚದೇ ದಿಗ್ಭ್ರಾಂತಳಾಗಿ ಕುಳಿತಿದ್ದೆ. ಆದರೆ ಮುಚ್ಚಿದ ಕಿಟಕಿ ಮತ್ತೆ ತೆರೆಯುವ ಧೈರ್ಯವಾಗಲಿಲ್ಲ. ಅದೆಷ್ಟು ಹೊತ್ತು ಹಾಗೇ ಕುಳಿತಿದ್ದೆ!

ಇದ್ದಕಿದ್ದಂತೆ ಬಾವಿಯಲ್ಲಿ ದುಡುಂಯೆಂದು ಬಿದ್ದ ಸದ್ದು! ಮತ್ಯಾರೋ ಕಿರುಚಿಕೊಂಡ ಸದ್ದು! ಮತ್ತೆಲ್ಲಾ ನಿಶ್ಶಬ್ದ! ಮತ್ತೆ ಅದೇ ಅಯೋಮಯ ಸ್ಥಿತಿ. ಕಂಡದ್ದು ಕನಸೋ ಭ್ರಮೆಯೋ ಅರಿಯದ ಮತ್ತದೇ ಭ್ರಾಮಕ ಜಗತ್ತು ಮೆಲ್ಲನೆ ತೆರೆದುಕೊಳ್ಳತೊಡಗಿತು...

ನಿನ್ನೆ ಅಮ್ಮ ಫೋನ್ ಮಾಡಿದ್ದಳು.

'ವಾರದ ಹಿಂದೆ ಸುಬ್ರಮಣೀ ಮಗ್ಳು ನೇಣ್



ಚಿತ್ರ: ನಂಜುಂಡಸ್ವಾಮಿ

ಹಾಕ್ಕೊಂಡು ಸತ್ಲಂತೆ ಕಣೇ.'

'ಯಾವ ಸುಬ್ರಮಣಿ?' ಕೇಳಿದೆ.

'ಅದೇ ಆಯವ್ವಳ ಓಡಿ ಹೋದ ಗಂಡ ಇದ್ನಲ್ಲೇ. ಇವಳ್ನಾ ಬಿಟ್ಟು ಮತ್ಯಾರನ್ನೋ ಕಟ್ಕೊಂಡಿದ್ನಂತಲ್ಲಾ. ಅವ್ಳೂ ಎಂದೋ ಬಾವಿ ಕಂಡಳಂತಪ್ಪಾ. ಇವ್ನೂ ಎಲ್ಲೋ ಹೋಗಿ ಹೆಂಗೋ ಸತ್ತನಂತೆ. ಕಡೆಗೆ ಆಯವ್ವಳೇ ಹೋಗಿ ಅವ್ನ ಮಗಳ್ನಾ ಕರ್ಕೊಂಡು ಬಂದು ತನ್ನ ಮನೇಲಿ ಇಟ್ಕೊಂಡು ಸಾಕಿದಂತಲಾ. ಆಯವ್ವ ಹೋಗಿಯೇ ಸುಮಾರು ವರ್ಷ ಆಗಿತ್ತು. ಈಗ ಮಗ್ಳೂ ಹೋದ್ಲಂತೆ...'

...

●